"ಸ್ವಲ್ಪ ತಡೀರಿ..." ತರೇಸ ಮತ್ತೆ ಕಿರುಚಿದಳು, "ದೀಪು ಅಡ್ಮಿಷನ್ ನಾಳೆ. ನನಗೆ ಕೊಂಚವೂ ಟೈಮಿಲ್ಲ. ಬ್ಯಾಂಕಿನಲ್ಲಿ ಇಬ್ಬರು ಅಸಿಸ್ಟೆಂಟ್ ಮ್ಯಾನೇಜರ್ ರಜೆಯಲ್ಲಿದ್ದಾರೆ. ಈ ಟೆನ್ಶನ್ ನಡುವೆ ನಾಳೆ ಬೆಳಗ್ಗೆ ಎದ್ದು ಎಂಜಿನಿಯರಿಂಗ್ ಕಾಲೇಜಿಗೆ ಹೋಗ್ಲಿಕ್ಕೆ ನನಗಂತೂ ಸಾಧ್ಯವಿಲ್ಲ. ಒಂದೂ ಕಾಲು ಲಕ್ಷ ಹಣ ನಾಳೆನೇ ಕಟ್ಟಬೇಕು..."

"ಕ್ಯಾಶ್ ತೆಗೆದಿಟ್ಟಿದ್ದೀನಲ್ಲ..." ಪ್ರೇಮಚಂದ್ರ ಹೇಳಿದ.

"ಹೌದು, ಆದರೆ ದೀಪುವಿನ ಗಾರ್ಡಿಯನ್ನಾಗಿ ಯಾರಾದರೊಬ್ಬರು ಹೋಗಲೇಬೇಕಲ್ಲ. ಅದೆಲ್ಲ ಬೇಡ, ನಾನು ಒಂದು ವಿಷಯವನ್ನು ನಿಮಗೆ ಫ್ರಾಂಕಾಗಿ ಹೇಳ್ ಬಿಡ್ತೀನಿ... ನೀವು ನಾಳೆ ಬೆಳಗ್ಗೆ ಇಲ್ಲಿಗೆ ಬಂದಿರಬೇಕು."

ತರೇಸಾ ಫೋನ್ ಇಟ್ಟಳು.

ಪ್ರೇಮಚಂದ್ರ ಅಪ್ಪನ ಪಾದಗಳನ್ನು ನೋಡಿದ. ಅವನಿಗೆ ತಿಳಿದಾಗಿನಿಂದ ಅಪ್ಪ ಅದನ್ನು ಕೆಸರಿನಲ್ಲಿಯೇ ಹೂತಿಟ್ಟಿದ್ದರು. ಎರೆಹುಳುಗಳಿಗೂ, ಕೆಲವು ಜಲಚರಗಳಿಗೂ ಅಂತೆಯೇ ಕೆಲವು ಸೂಕ್ಷ್ಮಜೀವಿಗಳಿಗೂ ಅಪ್ಪನ ಪಾದಗಳ ಒಳ್ಳೆಯ ಪರಿಚಯವಿದೆ.

ಅಪ್ಪನ ಉಗುರುಗಳು ಕೆಂಪಾಗಿ, ತಗಡಿನಂತಾಗಿವೆ. ಅದರ ಅಂಚುಗಳನ್ನು ಕ್ರಿಮಿಕೀಟಗಳು ತಿಂದಿವೆ. ಎದೆಯ ನೆರೆತ ರೋಮಗಳಿಗೆ ಭತ್ತದ ಕಾಳುಗಳು ಅಂಟಿಕೊಂಡಿವೆ. ಅವರ ಬೆವರಿಗೆ ಒಣಹುಲ್ಲಿನ ವಾಸನೆ.

ಅಸಲಿಗೆ, ಅಪ್ಪನಿಗೆ ಓದಲು ಬರೆಯಲು ಬರುವುದಿಲ್ಲ.

ಪ್ರಕಾಶ್, ಸಾಧು, ದಿನೇಶ್ ಎಂಬ ಬೀಡಿಗಳ ಹೆಸರು ಅಪ್ಪನಿಗೆ ಕಂಠಪಾಠ. ಅವುಗಳನ್ನು ಬರೆಯಲೂ ಗೊತ್ತಿದೆ. ಬೀಡಿಯ ಪೊಟ್ಟಣಗಳನ್ನು ನೋಡಿ ಕಲಿತದ್ದು.

ಪ್ರೇಮಚಂದ್ರ ಈ ತನಕ ಗದ್ದೆಗೆ ಕಾಲು ಇಳಿಸಿದವನಲ್ಲ. ಅದಕ್ಕೇನೂ ಅಪ್ಪನಿಗೆ ಬೇಸರವೂ ಇಲ್ಲ. ಅಪ್ಪ ಮಗನನ್ನು ಶಾಲೆಗೆ ಸೇರಿಸಿದ್ದು ನಿಜ, ಆದರೆ ಓದು, ಕಲಿ ಎಂದು ಹೇಳಿದವರಲ್ಲ. ಅವನಿಗೆ ಅಗತ್ಯವೆನಿಸಿದಾಗ ಹಣಕ್ಕೆ ಬದಲು ತೆಂಗಿನಕಾಯಿ, ಮೆಣಸು, ಅಡಿಕೆಗಳನ್ನು ಕೊಡುತ್ತಿದ್ದರು. ಇಷ್ಟು ವರ್ಷಗಳಾದರೂ ಅಪ್ಪ ಹಣಕಾಸಿನ ವ್ಯವಹಾರ ಮಾಡಿದ್ದನ್ನು ಯಾರೂ ಕಂಡಿಲ್ಲ.

ಐದು ಅಡಿಕೆ ಕೊಟ್ಟರೆ ಒಂದು ಕಟ್ಟು ಪ್ರಕಾಶ್ ಬೀಡಿ!

ಒಂದು ಬಳ್ಳಿ ಮೆಣಸಿಗೆ ಎರಡು ತುಂಡು ಪಂಚೆಗಳು!

ಇದು ಅಪ್ಪನ ವ್ಯವಹಾರದ ರೀತಿನೀತಿಗಳು.

ದೆಹಲಿಗೆ ಇಂಟರ್ವ್ಯೂಗೆ ಹೋಗಬೇಕೆಂದಾಗ ಅಪ್ಪ ದೊಡ್ಡ ಚೀಲದಲ್ಲಿ ಮೆಣಸನ್ನು ತುಂಬಿ ಮಗನ ಮುಂದಿಟ್ಟಿದ್ದರು.

ಅಪ್ಪ ಪ್ರೇಮಚಂದ್ರನನ್ನು ದೆಹಲಿಗೆ ಕಳುಹಿಸಲು ಕಳನಾಡು ರೈಲ್ವೆ ನಿಲ್ದಾಣಕ್ಕೆ ಬಂದಿರಲಿಲ್ಲ.

"ದೊಡ್ಡ ನಗರ ಕಣಪ್ಪ. ಕೆಟ್ಟ ಸಹವಾಸಕ್ಕೆ ಬಿದ್ದು ಹಾದಿ ತಪ್ಪಬೇಡ. ಓದಿ ದೊಡ್ಡ ವ್ಯಕ್ತಿಯಾಗಬೇಕು."

ಮಕ್ಕಳು ಎಲ್ಲಿಗಾದರೂ ಹೊರಟು ನಿಂತರೆ ಹೆತ್ತವರು ಇಂತಹ ಉಪದೇಶ ನೀಡಿ ಬೋರು ಹೊಡೆಸುವುದು ಸಹಜ. ಆದರೆ ಅಪ್ಪ ಪ್ರೇಮಚಂದ್ರನಿಗೆ ಅಂತಹ ಬುದ್ಧಿಮಾತುಗಳನ್ನೇನೂ ಹೇಳಿರಲಿಲ್ಲ. ಅದರ ಬದಲು ಎಲ್ಲಿ ಬೆಳೆಯಬೇಕೆಂದು ತಿಳಿಯದ ನೆಲದ ಮೇಲೆ ಬಿದ್ದಿದ್ದ ಬಳ್ಳಿಯೊಂದನ್ನು ಕಿತ್ತು, ಸೂರ್ಯಕಿರಣ ಚೆನ್ನಾಗಿ ಬೀಳುವ ಬೇಲಿಯ ಬದಿಯಲ್ಲಿ ನೆಟ್ಟು, ಮಗನನ್ನು ನೋಡಿ ಅರ್ಥಗರ್ಭಿತವಾಗಿ ನಕ್ಕಿದ್ದರು. ಬಾಯಿಯಲ್ಲಿ ಹೇಳಬೇಕೆಂದಿದ್ದ ಉಪದೇಶಾಮೃತಗಳೆಲ್ಲಾ ಅಪ್ಪನ ಕ್ರಿಯೆಯಲ್ಲಿ ಅಡಗಿದೆಯೆಂದು ಪ್ರೇಮಚಂದ್ರ ತಿಳಿದುಕೊಂಡಿದ್ದ.

ಪ್ರತಿಯೊಂದು ಬೀಜ, ಬಳ್ಳಿ, ಅದರಲ್ಲಿ ಅರಳುವ ಹೂ, ಕಾಯಿಗಳು ಬದುಕಿಗೆ ಸಂಬಂಧಿಸಿರುವ